ಸೃಜನಿ

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 67-73
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸವದತ್ತಿ ಎಲ್ಲಮ್ಮನ ಪರಂಪರೆ ಮತ್ತು ದೇವದಾಸಿ ಪದ್ಧತಿ: ಐತಿಹಾಸಿಕ ಅಧ್ಯಯನ

**ಆನಂದ ಎಸ್. ಎನ್**

ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

***Abstract:***

*ಬೆಳಗಾವಿ ಜಿಲ್ಲೆಯಿಂದ ಸವದತ್ತಿ 85 ಕಿಲೋಮೀಟರ್ ಅಂತರವಾಗಿದೆ. ಸವದತ್ತಿ ತಾಲೂಕು ಕೇಂದ್ರವಾಗಿ ಪ್ರಾಚೀನ ಕಾಲದಲ್ಲಿ 'ಸುಗಂಧವರ್ತಿ' ಎಂದು ಹತ್ತನೇ ಶತಮಾನದಲ್ಲಿ ಕರೆಯುತ್ತಿದ್ದ ಮಾಹಿತಿಯನ್ನು ಕ್ರಿ.ಶ. 989ರ ಶಾಸನದಿಂದ ತಿಳಿಯಬಹುದು. ಈ ಪ್ರದೇಶದಲ್ಲಿರುವ ನೀರಿನಿಂದ ಅದರಲ್ಲೂ ಮುಖ್ಯವಾಗಿ ಎಣ್ಣೆ ಹೊಂಡದಲ್ಲಿ ಸ್ನಾನ ಮಾಡಿದರೆ ಚರ್ಮರೋಗ ನಿವಾರಣೆಯಾಗುತ್ತದೆ ಎಂಬ ನಂಬಿಕೆಯಾಗಿದೆ. ಪ್ರಸ್ತುತ ಲೇಖನದಲ್ಲಿ ದೇವದಾಸಿ ಪದ್ಧತಿ ಕುರಿತು ಐತಿಹಾಸಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.*

***Keywords:*** *ಸವದತ್ತಿ ಎಲ್ಲಮ್ಮ, ದೇವದಾಸಿ ಪದ್ಧತಿ, ಧಾರ್ಮಿಕ ನಂಬಿಕೆ.*

## ಪೀಠಿಕೆ

ಶಕ್ತಿಯ ಕೇಂದ್ರವಾಗಿ ಸವದತ್ತಿ ಮತ್ತು ಜೈನಧರ್ಮ ಪ್ರಚಾರದಲ್ಲಿದ್ದ ಪ್ರದೇಶವಾದ್ದರಿಂದ ಕೆಲವರು ಸವಣನ+ದತ್ತಿ=ಸವದತ್ತಿಯಾಗಿ ನಿಷ್ಪತ್ತಿ ಹೊಂದಿರಬಹುದು. ರಟ್ಟರ ಆರಂಭದ ರಾಜಧಾನಿ ಸುಗಂಧವರ್ತಿಯಾಗಿದ್ದು. ನಂತರ ಕಾಲದಲ್ಲಿ ವೇಣುಗ್ರಾಮಕ್ಕೆ (ಬೆಳಗಾವಿಗೆ) ಸ್ಥಳಾಂತರವಾಯಿತು ಎಂಬುದನ್ನು ಐತಿಹಾಸಕವಾಗಿ ತಿಳಿಯಬಹುದು. ಕ್ರಿ.ಶ.6ನೇ ಶತಮಾನದಲ್ಲಿ ಸವದತ್ತಿ ಕಥೆ ಆರಂಭವಾಯಿತು. ಆ ಕಾಲಘಟ್ಟದಲ್ಲಿ ಜೈನಧರ್ಮ ಪ್ರಚಾರದಲ್ಲಿತ್ತು. ಆಗಿನ ಜೈನ ದೊರೆಗಳಾದ ರಟ್ಟರ ಬೆಂಬಲ ಪಡೆದ ಧರ್ಮ ಪ್ರಚಾರಕರು ಸವದತ್ತಿಯ ಪ್ರದೇಶವನ್ನು ಆಳ್ವಿಕೆ ಮಾಡಿದರು. ದೇವತೆಯನ್ನು ಪದ್ಮಾವತಿಯನ್ನಾಗಿ, ದಾಸಿಯರಾಗಿದ್ದ ಕಪಾಲಿಕರ ಸೇವೆಗಿದ್ದ ಬಸವಿಯರನ್ನು ಮತಾಂತರಿಸಿ ಜೈನ ಸನ್ಯಾಸಿಯರಾಗಿ 9ನೇ ಶತಮಾನದಷ್ಟರೊಳಗೆ ರಟ್ಟರ ರಾಜ್ಯದಲ್ಲಿ ಪದ್ಮಾವತಿಯ ಭಕ್ತರು ಆರಾಧಕರು ಹೆಚ್ಚಾದರು[1]. ಚಾಲುಕ್ಯ ಮಾಂಡಲೀಕರಾಗಿ ಸವದತ್ತಿ ಪ್ರದೇಶ ಆಳುತ್ತಿದ್ದರು. ಕ್ರಿಸ್ತಶಕ 980ರಲ್ಲಿ ಒಂದನೇ ಕಾರ್ತವೀರ್ಯ ಸ್ವಾತಂತ್ರ್ಯವಾಗಿ ರಾಜ್ಯಭಾರ ಮಾಡಿದ ಬಗ್ಗೆ ಸೊಗಲ ಶಾಸನದಿಂದ ತಿಳಿಯಬಹುದು. ರಟ್ಟರ ವಂಶಸ್ಥರ ರಾಜಧಾನಿಯಾಗಿ 9ನೇ ಶತಮಾನದಿಂದ 11ನೇ ಶತಮಾನದವರೆಗೆ ನೋಡಬಹುದು. ನಂತರದಲ್ಲಿ 'ಸುಗಂಧವರ್ತಿ'ಯ ನಾಡಾಗಿ ಪ್ರಸಿದ್ಧಿ ಪಡೆಯಿತು. ಈ ನಾಡಿಗೆ ಸುಗಂಧವರ್ತಿ ಹೆಸರು ಬರಲು ಕಾರಣ. ನೇಕಾರರು ನೂಲಿಗೆ ಬಣ್ಣ

[1] ಚೆನ್ನಣ್ಣ ವಾಲೀಕಾರ. (2001). *ಕರ್ನಾಟಕ ದೇವದಾಸಿಯರ ಸಮಾಜೋ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ.* ಪುಟ 131.

***Please cite this article as:*** ಆನಂದ ಎಸ್. ಎನ್. (2025). ಸವದತ್ತಿ ಎಲ್ಲಮ್ಮನ ಪರಂಪರೆ ಮತ್ತು ದೇವದಾಸಿ ಪದ್ಧತಿ: ಐತಿಹಾಸಿಕ ಅಧ್ಯಯನ, *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(1), 67–73

ಹಾಕುವಾಗ ಸುಗಂಧವನ್ನು ಬೆರೆಸುತ್ತಿದರಿಂದ ಸುಗಂಧವರ್ತಿಯ ನಾಡಾಯಿತು[2].

**ಎಲ್ಲಮ್ಮ ಪರಂಪರೆ**

ಎಲ್ಲಮ್ಮ ಆದಿ ದೇವತೆಯಾಗಿ ಮರ, ಗಿಡ, ಬಳ್ಳಿಗಳಿಂದ ಆಹಾರ ಪಡೆಯುತ್ತಿದ್ದು ನಂತರ ಕಾಲದಲ್ಲಿ ವಾತಾವರಣ ಬದಲಾವಣೆಯಿಂದ ಕಾಡನ್ನು ಬಿಟ್ಟು ಗ್ರಾಮವನ್ನು ಸೇರಿದಳು. ಆಕೆಯ ಗುಡಿ ಊರಿನ ಗಡಿ(ಎಲ್ಲೆ)ಯಲ್ಲಿ ಕಟ್ಟಿದ್ದರಿಂದ ಎಲ್ಲಮ್ಮನಾದ ಐತಿಹ್ಯ ಆಂಧ್ರ ಪ್ರದೇಶದ ಎಲ್ಲೈವಾಡಿರಿ ಎಂಬ ಹೆಸರಿನ ದೇವತೆ ಇರುವಳೆಂದು ತಿಳಿಯಬಹುದು[3]. ಎಲ್ಲಮ್ಮನೂ ದ್ಯಾವಮ್ಮ, ಮರಗಮ್ಮ, ದುರ್ಗಮ್ಮರಂತೆಯೆ ಮಾಂಸಾಹಾರಿ ದೇವತೆಯಾಗಿ ಎಲ್ಲಮ್ಮ ಪಾರ್ವತಿಯ ಶಕ್ತಿ ಅಂಶದವಳೆಂದು ಸಾಕ್ಷಾತ್ ಮಹಾರಾಷ್ಟ್ರದ ಅಂಬಾಭವಾನಿಯೇ ಎಂದುಭಾವಿಸಿ ಆಕೆಯನ್ನು ಪ್ರತ್ಯೇಕವಾಗಿಟ್ಟು ಪೂಜಿಸುವುದನ್ನು ನೋಡಬಹುದು.

***ಯಾಕಾಲಿಗೆ ಜೋಗ್ಯಾಕಲಿಗೆ ಜೋಗೋ ಉಧೋ ಉಧೋ***

***ಯಾಕಾಲಿಗೆ ಜೋಗ್ಯಾಕಲಿಗೆ ಜೋಗೋ ಉಧೋ ಉಧೊ***

ಎಂಬುದಾಗಿ ಹಾಡಿ ನಾಲ್ಕು ದಿಕ್ಕಿಗೂ ನಿಂತು ನಾಲ್ಕು ಸಲ ಹೇಳಿ ಕೈಮುಗಿಯುವುದನ್ನು ಕಾಣಬಹುದು.

ಶಕ್ತಿ ದೇವತೆ ಎಲ್ಲಮ್ಮಳು ಉತ್ತರ ಕರ್ನಾಟಕದ ಜನಪ್ರಿಯ ದೇವತೆಯಾಗಿದ್ದಾಳೆ. ಎಲ್ಲಮ್ಮ ಮೂಲದಲ್ಲಿ ಸಮೃದ್ಧಿ ದೇವತೆ ಇರಬಹುದು ಏಕೆಂದರೆ ಎಲ್ಲಮ್ಮನ ಭಕ್ತರು ಹೊರುವ ಕೊಡವಾಗಲೀ, ಜಗವಾಗಲೀ, ಸಮೃದ್ಧಿಯ ಸಂಕೇತವಾಗಿದೆ. ಇದಷ್ಟೇ ಅಲ್ಲದೆ ಇವರ ಕುಣಿತ ಕೂಡ ಮಂಡಲಾಕಾರದಲ್ಲಿರುತ್ತದಾದ್ದರಿಂದ ಇದು ಸಮೃದ್ಧಿ ಆರಾಧನೆಯ ಸಂಕೇತವೇ ಆಗಿರಬೇಕೆಂಬುದು ಇವರ ಅಭಿಪ್ರಾಯವಾಗಿದೆ. ಎಲ್ಲಮ್ಮ, ಹುಲಿಗೆಮ್ಮ, ರೇಣುಕಾ ಇತ್ಯಾದಿ ಹೆಸರುಗಳಿಂದ ಉತ್ತರ ಕರ್ನಾಟಕದಾದ್ಯಂತ ಆರಾಧನೆಗೊಳ್ಳುವ ಈ ದೇವತೆಯ ಗುಡಿಗಳು ಅನೇಕ ಕಡೆ ಕಂಡುಬಂದರೂ ಅದರಲ್ಲಿ ಪ್ರಮುಖವಾಗಿ ಬೆಳಗಾವಿ ಜಿಲ್ಲೆಯ ಸವದತ್ತಿ ಎಲ್ಲಮ್ಮಳು ಮಹತ್ವವಾಗಿದ್ದಾಳೆ.

**ಸವದತ್ತಿ ಎಲ್ಲಮ್ಮನ ದೇವಾಲಯ**

ಸವದತ್ತಿ ಎಲ್ಲಮ್ಮ ದೇವಾಲಯ ಕೆಂಪು ಮಿಶ್ರಿತ ಮರಳು ಶಿಲೆಯಿಂದ ನಿರ್ಮಿತವಾಗಿದ್ದು. ಏಕಕೂಟ ದೇವಾಲಯವಾಗಿ ಗರ್ಭಗೃಹವು ಚೌಕಾಕಾರದಲ್ಲಿದ್ದು. ಮಧ್ಯದಲ್ಲಿ ಎಲ್ಲಮ್ಮ ದೇವಿಯನ್ನು ಪ್ರತಿಷ್ಠಾಪಿಸಲಾಗಿದೆ. ದ್ವಾರಶಾಖೆ ಮತ್ತು ಮಂಗಳ ಫಲಕಕ್ಕೆ ಬೆಳ್ಳಿಯ ತಗಡಿನ ಲೇಪನ ಮತ್ತು ದ್ವಾರದ ಮೇಲೆ ಐದು ಶಿಖರದ ಪ್ರತಿಕೃತಿಗಳಿಂದ ಕೂಡಿದ್ದು. ಮೂರು ದ್ರಾವಿಡ, ಎರಡು ರೇಖಾನಗರ ಶೈಲಿ ಹಾಗೂ ಕದಂಬ ನಾಗರ ಶೈಲಿ ಮತ್ತು ಜೈನ ಬಿಂಬಗಳನ್ನು ನೋಡಬಹುದು. ಚೌಕಾಕಾರದ ಸಭಾ ಮಂಟಪದ ಛತ್ತು ಇಳಿಜಾರದ ಪುಷ್ಪಬೋದುಗೆ, ಕೋನಾಕಾರವಾಗಿ ಮಧ್ಯದಲ್ಲಿ ನಾಲ್ಕು ಕೀರ್ತಿ ಮುಖದ ಜೊತೆಗೆ ಸ್ತಂಬಗಳು ಚಾಲುಕ್ಯ ಶೈಲಿಯಲ್ಲಿ ಕಾಣಬಹುದು. ಎಲ್ಲಮ್ಮ ಮೂರ್ತಿಯೂ ಕುಳಿತ ಭಂಗಿಯಲ್ಲಿ ಖಡ್ಗ, ಕಮಲದ ಹೂವು, ಪಾನ ಪಾತ್ರೆಯನ್ನು ಹಸ್ತದಲ್ಲಿ ಧರಿಸಿ ಮತ್ತೊಂದು ಕೈಯಲ್ಲಿ ತ್ರಿಶೂಲ ಇರುವುದನ್ನು ಪ್ರತ್ಯೇಕವಾಗಿ ಕಾಣಬಹುದು ಈ ಒಂದು ರೀತಿಯ ಲಕ್ಷಣಗಳನ್ನು ಗಮನಿಸದಾಗ ಪದ್ಮಾವತಿ ಯಕ್ಷಿಯನ್ನು ಹೋಲುತ್ತದೆ ಎಂಬುದಾಗಿ ಅಭಿಪ್ರಾಯವಿದೆ.

**ದೇವದಾಸಿ ಪದ್ಧತಿ**

ಭಾರತದ ಇತಿಹಾಸದಲ್ಲಿ ದೇವದಾಸಿ ಪದ್ಧತಿಯು ಒಂದು ಜನಪ್ರಿಯ ಸಂಸ್ಥೆಯಾಗಿತ್ತು. ದೇವದಾಸಿ

[2] ಭಾಗೀರತಿ ಕುಯ್ಯಾಗೋಳ. (2014). *ಸವದತ್ತಿ ತಾಲೂಕಿನ ಇಂಚಲ ಮಠ ಮತ್ತು ಅದರ ಶಾಖಾ ಮಠಗಳ ಒಂದು ಐತಿಹಾಸಿಕ ಅಧ್ಯಯನ.* ಇತಿಹಾಸ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ. ಪುಟ 47–50

[3] ಚಿದಾನಂದ ಮೂರ್ತಿ ಎಂ. (2015). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸ್ವಪ್ನ ಬುಕ್ ಹೌಸ್. ಪುಟ–1

(ತಮಿಳಿನಲ್ಲಿ ದೇವರಾದಿಯರ್) ಅಕ್ಷರಶಃ 'ದೇವರ ಸೇವಕರು' ಎಂಬ ಅರ್ಥವಾಗಿದೆ. ದೇವದಾಸಿಯರು ಭಾರತದಾದ್ಯಂತ ದೇವಾಲಯಗಳಲ್ಲಿ ದೇವರುಗಳಿಗೆ ಸೇವೆ ಸಲ್ಲಿಸುತ್ತಿದ್ದರು. ಪ್ರಪಂಚದ ಇತರೆ ಭಾಗಗಳಲ್ಲಿ ಇದೇ ರೀತಿಯ ಸಂಸ್ಥೆಗಳು ಇದ್ದವು ಉದಾಹರಣೆಗೆ ಬ್ಯಾಬಿಲೋನಿಯಾದ ಕದಿಷ್ಟು ಅಥವಾ ಕದೇಶ, ಈಜಿಪ್ಟ್‌ನ ಜೀಯಸ್(ಅಮ್ಮನ್)ನ 'ಉಪಪತ್ನಿಯರು', ಗ್ರೀಸ್‌ನ ಕೊರಿಂತ್‌ನ ಲೆಫೊ ಡೋವ್ರೊಯಿ, ಆಫ್ರಿಕಾದ ಸ್ಲೇವ್ ಕೋಸ್ಟ್‌ನ ಕೊಸಿಯೊ, ಪ್ರಾಚೀನ ರೋಮ್‌ನ 'ವೆಸ್ಟಲ್ ವರ್ಜಿನ್ಸ್', ಕಾಂಬೋಡಿಯಾದ ಅ–ನಾನ್, ಜಪಾನ್‌ನ ಗೀಷಾಗಳು, ಶ್ರೀಲಂಕಾದ ಹೆಣ್ಣುಮಕ್ಕಳು ನೃತ್ಯ ಮತ್ತು ಸೂರ್ಯ ದೇವರ ಸಮರ್ಪಿತ ಹುಡುಗಿಯರು. ಇಂಕಾಗಳು ಈ ಸಾಮಾಜಿಕ–ಧಾರ್ಮಿಕ ಸಂಸ್ಥೆಯ ಮೂಲವು ಕ್ರಿಸ್ತ ಶಕ 8ನೇ ಶತಮಾನದನಲ್ಲಿ ದೇವದಾಸಿಯರ ತಾಂತ್ರಿಕ ಆರಾಧನೆಯ ಜನಪ್ರಿಯತೆಯ ಯುಗಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ.

ಪುರುಷ ಪ್ರಧಾನ ಕುಟುಂಬದಲ್ಲಿ ಹೆಣ್ಣಿನ ಬಗ್ಗೆ ಕೀಳರಿಮೆಯೇ ದೇವದಾಸಿ ಪದ್ಧತಿಗೆ ಮೂಲ ಕಾರಣವಾಗಿದೆ. ಯಾಕೆಂದರೆ ಹೆಣ್ಣಿನ ಬುದ್ಧಿ ಮೊಳಕಾಲ ಕೆಳಗೆ ಎಂಬ ಗಾದೆ ಮಾತುಗಳನ್ನು ಸೃಷ್ಟಿಸಿ ಹೆಣ್ಣು ಗಂಡಿನ ಸ್ಥಾನಕ್ಕಿಂತ ಹೆಚ್ಚಿನ ಸ್ಥಾನ ಪಡೆಯದೆ ಸದಾ ತನ್ನ ಅಡಿಯಳಾಗಿ, ಗುಲಾಮಳಾಗಿ, ಸೇವಕಳಾಗಿ ಕೆಲಸ ಮಾಡಿ ಕೀಳರಿಮೆಯಿಂದ ಹೆಣ್ಣಿನ ಪ್ರತಿಭೆ, ಗುಣ, ಸೌಂದರ್ಯ, ಶಕ್ತಿ ಮತ್ತು ಜಾಣ್ಮೆಗಳ ಸಂಹಾರದಿಂದ ಆಳುತ್ತಾ, ತುಳಿಯುತ್ತಾ, ಭೋಗಿಸುತ್ತಿರುವುದು ಪುರುಷ ಪ್ರಧಾನ ಸಮಾಜದಲ್ಲಿನ ಭ್ರಷ್ಟತನವೇ ಕಾರಣವಾಗಿರುತ್ತದೆ[4].

ಪ್ರಾಚೀನ ಸಂಸ್ಕೃತಿಗಳಲ್ಲಿ ವೇಶ್ಯೆಯರಿಗೆ ಸ್ಥಾನವಿದ್ದು. ಭರತ ಖಂಡದಲ್ಲಿ ನಟಿ, ಗಣೀಕಾ, ಅಜ್ಜುಕಾ, ಅಭಿಸಾರಿಕಾ, ಅಪ್ಸರಾ, ಊರ್ವಶೀ, ಕುಲಾಟ, ಕುಟ್ಟನೀ, ಕುಂಭದಾನೀ ಹೆಸರುಗಳಿದ್ದವು. ಪಂಚಚೂಡರೆಂಬ ಅಪ್ಸರ ಸ್ತ್ರೀಯರಿಗೆ ಹುಟ್ಟಿದವರು ವೇಶ್ಯೆಯರು. ದೇವಾಲಯಗಳಲ್ಲಿ ದೇವದಾಸಿಯರು ವಂಶ ಪರಂಪರೆಯಾಗಿ ಸೇವೆ ಮಾಡುತ್ತಿದ್ದು. ಸಿಂಧೂ ಬಯಲಿನ ನಾಗರಿಕತೆಯಲ್ಲಿ ದೊರೆತ ಸ್ತ್ರೀ ವಿಗ್ರಹಗಳು ನಗ್ನವಾಗಿದ್ದು. ಮಾತೃ ದೇವತೆಯ ಮೂರ್ತಿ ಪ್ರತಿಯೊಂದು ಕುಟುಂಬದಲ್ಲೂ ಇತ್ತು ಎಂದು ಭಾವಿಸಲಾಗಿದೆ. ಹರಪ್ಪ ಸಂಸ್ಕೃತಿಯಲ್ಲಿ ದೊರೆತ 'ನರ್ತಿಸುವ ಹುಡುಗಿ'ಯ ವಿಗ್ರಹ ದೇವಾಲಯದ ನರ್ತಕಿಯರು ಮತ್ತು ಗಣಿಕಾ ಸ್ತ್ರೀಯರ ವರ್ಗವನ್ನು ಪ್ರತಿನಿದಿಸುತ್ತಾಳೆಂದು ಹೇಳಿದ್ದಾರೆ[5]. ವಾತ್ಸಾಯನ ಕಾಮಸೂತ್ರದಲ್ಲಿ ವೇಶ್ಯೆಯರಿಗೆ ಗಂಡಸರು ಮತ್ತು ರಾಜರುಗಳಿಂದ ರಾಜಮನ್ನಣೆ ಪಡೆಯಲು ನೃತ್ಯ ಮತ್ತು ಸಂಗೀತ ಅವಶ್ಯವಿತ್ತೆಂಬುದನ್ನು ತಿಳಿದು ಬರುತ್ತದೆ.

ದಕ್ಷಿಣ ದೇಶದ ದೇವಾಲಯಗಳೆಲ್ಲ ಸಂಗೀತ, ನಾಟ್ಯ ಸೇವೆಗಾಗಿ ದೇವದಾಸಿಯರಿಗೆ ಮನೆ, ಹೊಲ ಮುಂತಾದವುಗಳನ್ನು ದಾನ ನೀಡುವುದರ ಕುರಿತು ಶಾಸನಗಳಿಂದ ತಿಳಿಯಬಹುದು. ವಿಜಯನಗರ ಸಾಮ್ರಾಜ್ಯದಲ್ಲಿ ಗುಪ್ತ ರಾಜಕೀಯ ತಂತ್ರಗಳನ್ನು ಕಂಡುಹಿಡಿದು ಸಹಾಯ ಮಾಡುತ್ತಿದ್ದರು[6]. ಚಾಲುಕ್ಯರ 6ನೇ ವಿಕ್ರಮಾದಿತ್ಯನ ಸೇನಾಧಿಪತಿ ಮಹಾದೇವ ತನ್ನ ತಾಯಿಯ ಜ್ಞಾಪಕಾರ್ಥ ಒಂದು ದೇವಾಲಯ ಮತ್ತು ಒಂದು ದೇವದಾಸಿಯರಿಗಾಗಿ ವಸತಿ ಗೃಹಗಳನ್ನು ಕಟ್ಟಿಸಿದನೆಂದು ದಾಖಲಿಸಲಾಗಿದೆ[7].

ಅಲ್ತೇಕರರು ಭಾರತದಲ್ಲಿ ದೇವದಾಸಿ ಪದ್ಧತಿಯೂ ಕ್ರಿ.ಶ. ಮೂರನೇ ಶತಮಾನದ ಸುಮಾರಿನಲ್ಲಿ

[4] ಚೆನ್ನಣ್ಣ ವಾಲೀಕಾರ :2001, ಕರ್ನಾಟಕ ದೇವದಾಸಿಯರ ಸಮಾಜೋ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ. ಪುಟ 10

[5] ಬಾಶಮ್ ಎ.ಎಲ್. (2012). *ಪ್ರಾಚೀನ ಭಾರತವೆಂಬ ಅದ್ಭುತ.* ಐಬಿಎಚ್ ಪ್ರಕಾಶನ. ಪುಟ 31

[6] ಶ್ರೀಕಂಠಶಾಸ್ತ್ರೀ, ಎಸ್. (1944). *ಭಾರತೀಯ ಸಂಸ್ಕೃತಿ.* ಕಾಮಧೇನು ಪುಸ್ತಕ ಭವನ. ಪುಟ 141–142

[7] ಬಾಶಮ್ ಎ.ಎಲ್. (2012). ಪೂರ್ವೋಕ್ತ. ಪುಟ 266–267

ಆರಂಭವಾಗಿರಬಹುದೆಂಬ ಅಭಿಪ್ರಾಯವಾಗಿದೆ. ಕ್ರಿಸ್ತಶಕ ಮೂರನೇ ಶತಮಾನದಲ್ಲಿ ಉಜ್ಜಯಿನಿ ಮಹಾಕಾಳಿ ದೇವಾಲಯದಲ್ಲಿ ನರ್ತಕಿಯರಿದ್ದರೆಂಬುದನ್ನು ತಿಳಿಸಿದ್ದಾರೆ. ಪಾತ್ರವು ದೇವಾಲಯದ ಸೇವಾ ವರ್ಗದಲ್ಲೆ ಇರಬೇಕೆಂಬುದು ಕಡ್ಡಾಯವೇನಲ್ಲ ಎಂಬುದಾಗಿ ಪಟ್ಟ ಮಹಾದೇವಿ ಶಾಂತಲೆಯನ್ನು ಕುರಿತು ಇರುವ ಬೇಲೂರಿನ ಒಂದು ಶಾಸನದಿಂದ ತಿಳಿದು ಬರುತ್ತದೆ. ದೇವರ ಭೋಗದ ಸೂಳೆರಿಗೆ ದೇಗುಲದ ಬಳಿ ಸೀವಟದ ಸೂಳೆಗೇರಿ, ಸೀವಟದ ಪೂದೋಂಟಗಳು ಬಿಟ್ಟ ವಿಷಯವನ್ನು ಸೌಂದತ್ತಿಯ ಒಂದು ಶಾಸನದಿಂದ ದಾಖಲಾಗಿದೆ[8]. ಈಗ ಅನೇಕ ರೀತಿಯಾಗಿ ಅನಾದಿಕಾಲದಿಂದಲೂ ಹಿಡಿದು ಆಧುನಿಕ ಕಾಲದವರೆಗೆ ಇನ್ನೂ ದೇವದಾಸಿಯಾಗಿ ನನ್ನ ಪ್ರಕಾರಗಳಲ್ಲಿ ಮುಂದುವರೆದುಕೊಂಡು ಬರಲು ಮೇಲಿನ ಎಲ್ಲ ಕಾರಣಗಳು ಹಾಗೂ ಪೌರಾಣಿಕವಾಗಿ ನೋಡಿದಾಗ ಮನಸ್ಮೃತಿಯಲ್ಲಿ ಹೆಂಡತಿ ಗಂಡನ ಆಸ್ತಿ ಎಂದು ಹೇಳಿರುವುದು ಮತ್ತು ಮತ್ಸ್ಯ ಪುರಾಣದ ಉಲ್ಲೇಖಿಸಿದಂತೆ ಸ್ವತಃ ಅಥವಾ ಕೊಲ್ಲಲ್ಪಟ್ಟ ಅಸುರರ ಹೆಂಡತಿಯರಿಗೆ ದೇವಾಲಯಗಳಲ್ಲಿ ಸೇವೆ ಮಾಡಲು ಅಥವಾ ವೇಶ್ಯೆ ವೃತ್ತಿ ಮಾಡಲು ಶಾಸ್ತ್ರ ಪುರಾಣಗಳಿಂದ ಧರ್ಮ ಗ್ರಂಥಗಳಿಂದಲೂ ಈ ಪದ್ಧತಿಗಳು ಬೆಳೆಯಲು ಕಾರಣವೆಂಬುದನ್ನು ತಿಳಿಯಬಹುದು.

**ಮಾತೃ ದೇವತೆಗಳಲ್ಲಿ ದೇವದಾಸಿ ಪದ್ಧತಿಯ ಅಂಶಗಳು**

ಬುಡಕಟ್ಟಿನ ಜನ ಆರಂಭದಲ್ಲಿ ಬೇಟೆಗೆ ಹೋದಾಗ ಮನೆಯಲ್ಲಿದ್ದ ಹೆಂಗಸರು ಮನೆಯ ಹತ್ತಿರ ಬೆಳೆ ಬೆಳೆಯುವುದರ ಜೊತೆಗೆ ಪಶುಪಾಲನೆಯನ್ನು ಮಾಡುತ್ತಿದ್ದರು. ನಂತರ ಮನೆಯನ್ನು ಕಾಯುವವಳಾಗಿದ್ದಳು. ಬುಡಕಟ್ಟಿನ ಜನರು ಒಂದು ಗೂಡಿ ಹಳ್ಳಿಗಳನ್ನು ಸ್ಥಾಪಿಸಿ ಹಳ್ಳಿಯ ರಕ್ಷಣೆಗೆ ಊರಮ್ಮನನ್ನು ಮಾಡಿದರು. ಇವಳೆ ಮುಂದೆ ಗ್ರಾಮದೇವತೆಯಾದಳು. ಇವಳನ್ನು 'ಜಾಗತಿಕ ಇತಿಹಾಸದ ಪ್ರಥಮ ದೇವದಾಸಿ' ಎಂಬುದಾಗಿ ಗುರುತಿಸಿದ್ದಾರೆ.

ಗ್ರಾಮೀಣ ಸ್ತ್ರೀ ದೇವತೆಗಳೆನಿಸಿಕೊಂಡ ವಿಧವೆಯರ ಕಥೆಗಳು ಬಹುತೇಕ ಸಾಮಾನ್ಯ ವಿಧವಾ ಸ್ತ್ರೀಯರು ದೇವದಾಸಿಯರಾದದ್ದು ಸಂಪ್ರದಾಯಗಳಿಂದ ತಿಳಿಯಬಹುದು. ಶಿಷ್ಟ ದೇವತೆಗಳು ಮತ್ತು ಗ್ರಾಮ ದೇವತೆಗಳು ನೋಡಿದಾಗ ಶಿಷ್ಟ ದೇವತೆಗಳಿಗೆ ಹೊಗಳಿದರೆ ಇಷ್ಟ. ಗ್ರಾಮ ದೇವತೆಗಳಿಗೆ ಅಶ್ಲೀಲ ಭಾಷೆ ಬಹಳ ಪ್ರಿಯ. ಶಿಷ್ಟ ದೇವತೆಗಳು ಸಸ್ಯಾಹಾರ ಇಷ್ಟಪಟ್ಟರೆ, ಗ್ರಾಮ ದೇವತೆಗಳು ಮಾಂಸಾಹಾರ, ಮದ್ಯ, ಬೆತ್ತಲೆ ಸೇವೆಗಳನ್ನು ಇಷ್ಟ ಪಡುತ್ತಿದ್ದರು. ಇವೆಲ್ಲವೂ ಜೋಗತಿ ಬಸವಿಯರಿಗೆ ಸಂಬಂಧಿಸಿರುತ್ತದೆ. ಗ್ರಾಮ ದೇವತೆಗಳು ಕೆಳಜಾತಿಯವರ ಆಧಿದೈವ, ರಕ್ಷಣಾದೇವತೆಯಾಗಿ ಪೂಜೆ ಗಳಪಡಿಸುತ್ತಾರೆ. ಇಲ್ಲಿ ದೇವದಾಸಿ, ಜೋಗತಿ ಬಸವಿಯರು ಸರ್ವಜನರ ಸ್ವತ್ತಾಗಿರುವುದನ್ನು ತಿಳಿಯಬಹುದು[9].

**ದೇವದಾಸಿಯರಾಗಲು ಇರಬೇಕಾದ ಲಕ್ಷಣಗಳು**

ಶಿಷ್ಟರು ಮತ್ತು ಪರಿಶಿಷ್ಟರು ದೇವರಿಗೆ ತಮ್ಮ ಹೆಣ್ಣುಮಕ್ಕಳನ್ನು ಅರ್ಪಿಸುವ ವಿಧಾನ ಬೇರೆ ಬೇರೆಯಾದರೂ ಉದ್ದೇಶ ಮಾತ್ರ ಪೂರ್ವಾಶ್ರಮ ಕಡಿದು ಹಾಕಿ ದೇವರ ಸೊತ್ತನ್ನಾಗಿ ಮಾಡುವುದು ದೇವರ ಸೇವಗೆ ಅರ್ಪಿಸುವುದಾಗಿತ್ತು.

- ಹಿರಿಯ ಮಗಳನ್ನು ಅರ್ಪಿಸಬೇಕು.
- ಯಾವುದೇ ರೀತಿಯ ಖಾಯಿಲೆ ತುತ್ತಾಗಿರಬಾರದು.

[8] ಗೋಪಾಲರಾವ್ ಎಚ್. ಎಸ್. (1993). *ಶಾಸನಗಳ ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು– ಸಾಂಸ್ಕೃತಿಕ ಅಧ್ಯಯನ.* ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ.

[9] ಚೆನ್ನಣ್ಣ ವಾಲೀಕಾರ .(2001). ಕರ್ನಾಟಕ ದೇವದಾಸಿಯರ ಸಮಾಜೋ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ.. ಪುಟ 103–104

- ಹುಡುಗಿಯಾದವಳು ಋತುಮತಿ (ಅಂಟು ಮುಟ್ಟು) ಆಗಿರಬಾರದು.
- ಬುದ್ಧಿವಂತೆಯಾಗಿರಬೇಕು.

**ಎಲ್ಲಮ್ಮ ದೇವಿಯ ಹೆಸರಿನಲ್ಲಿ ಹುಟ್ಟಿಕೊಂಡ ಅನಿಷ್ಟ ಪದ್ಧತಿಗಳು**

ಸವದತ್ತಿ ಎಲ್ಲಮ್ಮನ ಫಲದಿಂದ ಒಂದು ಜನಾಂಗದ ಸಂಸ್ಕೃತಿ ರೂಪುಗೊಂಡಂತೆ, ಒಂದು ಜನಾಂಗದ ಸಂಸ್ಕೃತಿಯೂ ವಿಕೃತಿಯಾಗಿ ಹೋದದ್ದನ್ನು ಕಾಣಬಹುದು.

***ಬಸವಿಯರು:*** ಪ್ರಾಚೀನ ಕಾಲದಲ್ಲಿ ಸುಂದರವಿದ್ದ ವಸ್ತುಗಳೆಲ್ಲ ದೇವರಿಗೆ ಸಲ್ಲಲಿ ಎಂದು ಮುಗ್ದ ಹೆಣ್ಣು ಮಕ್ಕಳನ್ನು ಮುಗ್ದ ಭಕ್ತಿಯಲ್ಲಿ ದೇವರಿಗೆ ಅರ್ಪಿಸುತ್ತಿದ್ದರು. ದೇವರೆ ಗಂಡನಾಗಿರಲಿ ಎಂದು ದೇವರ ಸೇವೆಗೆ ಬಿಡುತ್ತಿದ್ದರು. ಮುಂದೆ ಅನೇಕ ಪರಿಸ್ಥಿತಿಗಳಿಂದ ಪಾವಿತ್ರ್ಯ ಹೊರಟು ಹೋಗಿ ಇಂದಿನ ಸೂಳೆಗಾರಿಕೆಯ ಮಾರ್ಗ ಹಿಡಿದಿದ್ದರಿಂದ ಬಸವಿಯಾಗಲು ಕಾರಣವೆಂಬುದಾಗಿ ತಿಳಿಯುತ್ತದೆ.

***ಬೆತ್ತಲೆ ಸೇವೆಯ ಸತ್ಯಾಸತ್ಯತೆ:*** ಈ ಸೇವೆಯು ಮುಗ್ಧಕೂಸಿನ ರೂಪದಲ್ಲಿ ದೇವರೆದುರಿಗೆ ಹೋಗಬೇಕೆನ್ನುವ ಅರ್ಥವಾಗಿತ್ತು. ಬುಡಕಟ್ಟಿನ ಜನ ಶುದ್ದಾರ್ಥದಲ್ಲಿ ಮೈಮೇಲಿನ ಮೋಹ ತೆಗೆದು ದೇವರನ್ನು ಪೂಜಿಸಬೇಕೆಂಬ ಒಳಾರ್ಥವನ್ನು ಒಳಗೊಂಡಿತ್ತು. ಇದರಿಂದ ತನ್ನ ಹಿರಿಮೆಯನ್ನು ಕಳಕೊಂಡು ಸೂಳೆಗಾರಿಕೆಗೆ ಅನುವು ಮಾಡಿಕೊಟ್ಟಿತು. ಮೇಲ್ವರ್ಗದ ಜನ ದೇವರು ಧರ್ಮಗಳ ಹೆಸರಿನಲ್ಲಿ ದುರ್ಲಾಭ ಪಡೆದಂತೆ ಈ ಬೆತ್ತಲೆ ಸೇವೆಯಿಂದ ತಮ್ಮ ಇಂದಿನ ತೀಟೆಗಳನ್ನು ಪುಕ್ಕಟ್ಟೆ ಸುಖ ಭೋಗ ಪಡೆಯಲು ಬಡ ಹೆಣ್ಣುಮಕ್ಕಳ ಬದುಕು ಬಲಿ ತೆಗೆದುಕೊಂಡಿದ್ದು[10]. ಇಂತಹ ಹೀನ ಸಂಪ್ರದಾಯಗಳನ್ನು ಸಮಾಜದಲ್ಲಿ ಕಾಣಬಹುದು.

***ಎಲ್ಲಮ್ಮನ ಹೆಸರಿನಲ್ಲಿ ದೀಕ್ಷೆ ಪಡೆಯುವುದು:*** ಇತ್ತೀಚಿನ ಕಾಲದಲ್ಲಿ ದೇವಸ್ಥಾನಗಳಲ್ಲಿ ಭಿಕ್ಷೆ ಬೇಡುವುದು ಅತಿಯಾಗಿದೆ. ಎಲ್ಲಮ್ಮನ ಹೆಸರಿನಲ್ಲಿ ಪಾದಕಟ್ಟಿಸಿಕೊಂಡವರು ಬುಟ್ಟಿ ಹೊತ್ತವರು, ಕವಡಿಸರ ಹಾಕಿಕೊಂಡವರು, ಮನೆಮನೆ, ಊರೂರು, ಕೇರಿ ಕೇರಿ, ಅಂಗಡಿ ಅಂಗಡಿ ತಿರುಗುತ್ತಾ ಜನರಿಗೆ ಬೇಸರ ಬರುವಷ್ಟು ಭಿಕ್ಷೆ ಬೇಡುತ್ತಿರುವುದನ್ನು ಇಂದಿಗೂ ನೋಡಬಹುದು. ದಿನವೆಲ್ಲ ಭಿಕ್ಷೆ ತೆಗೆದುಕೊಂಡ ಹಣದಿಂದ ಎಣ್ಣೆ ಕುಡಿಯುವುದು ಅಷ್ಟೇ ಅಲ್ಲದೆ, ಕೆಲವು ಜೋಗಪ್ಪರು ಹಣ ಕೊಟ್ಟು ಸಲಿಂಗರತಿಗೆ ತೊಡಗುವುದರಿಂದ ಹಲವಾರು ರೋಗಗಳಿಂದ ನರಳುವ ಸ್ಥಿತಿಗೆ ತಲುಪುತ್ತಾರೆ. ಇವೆಲ್ಲವುಗಳ ಪರಿಣಾಮದಿಂದ ಅಜ್ಞಾನ, ಮೂಢನಂಬಿಕೆ, ಬಡತನ, ಸೋಮಾರಿತನ ಮುಂತಾದ ದುಸ್ಥಿತಿಗಳಿಗೆ ದಾರಿ ಮಾಡಿಕೊಡುತ್ತದೆ. ಊರ ಸೂಳೆಯರಿಗೆ ಇರುವ ಮರ್ಯಾದೆ ಜೋಗತಿಯರಿಗೆ ಮತ್ತು ಬಸವಿಯರಿಗೆ ಇಲ್ಲ ಯಾಕೆಂದರೆ ಇವರನ್ನು ಕಂಡರೆ ಪುಗಸಟ್ಟೆಯಂತೆ ಜನ ಬಳಸಿಕೊಳ್ಳುವುದನ್ನು ಕಾಣಬಹುದು[11].

***ಜೋಗಮ್ಮ ಜೋಗಪ್ಪ:*** ದೇವರಿಗೆ ಬಿಟ್ಟ ಈ ಬಸವಿ ಬಸವರು ಭಕ್ತಿಭಾವದಲ್ಲಿ ಸಿದ್ದಿಸಾಧಿಸಿ ಒಂದು ಮಟ್ಟ ಮುಟ್ಟಿದಾಗ ಜೋಗಮ್ಮ ಜೋಗಪ್ಪರಾಗುವರೆಂದು ಇದನ್ನು ಉದ್ಯೋಗದಂತೆ ಪರಿಗಣಿಸುವರು. ಜೋಗಮ್ಮ ಜೋಗಪ್ಪರಾಗಲು ಬಯಸುವವರು ಯಾರೆಂದರೆ ಬೇನೆಗಳಿಗೆ ಒಳಗಾದವರು, ಸುಖವಾಗಿ ಇರಬೇಕೆನ್ನುವವರು, ವೇಶ್ಯೆಗಾರಿಕೆಯಲ್ಲಿ ತೊಡಗಿ ಅನೇಕ ಕಾಯಿಲೆಗಳಿಗೆ ತುತ್ತಾದದ್ದನ್ನು ಗಮನಿಸಬಹುದು[12].

**ದೇವದಾಸಿ (ಜೋಗಮ್ಮರ) ಜೀವನ ವಿಧಾನ**

[10] ಅದೇ. ಪುಟ 145

[11] ಬೋರಲಿಂಗಯ್ಯ ಹಿ. ಚಿ. (1996). *ಕರ್ನಾಟಕ ಜನಪದ ಕಲೆಗಳ ಕೋಶ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪುಟ 80

[12] ಚೆನ್ನಣ್ಣ ವಾಲೀಕಾರ. (2001). *ಕರ್ನಾಟಕ ದೇವದಾಸಿಯರ ಸಮಾಜೋ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ.* ಪುಟ 145

***ನಿತ್ಯ ಕಾರ್ಯ:*** ಬೆಳಗ್ಗೆ ಎದ್ದ ತಕ್ಷಣ ಸ್ನಾನಮಾಡಿ ಕುಂಕುಮ ಭಂಡಾರ ಹಚ್ಚಿಕೊಂಡು ಚಹಾ ಕುಡಿದು ದೇವಿಯ ಜಗಹೊತ್ತು ಊರೊಳಗೆ ಹೊರಡುವರು. ಊರಿನ ಜನ ನೀಡಿದ ಅನ್ನ, ಬೇಳೆ, ರೊಟ್ಟಿ ತಂದು ಗುಡಿಸಲೊಳಗೆ ತಿನ್ನುವರು. ಬಂದ ಹಣದಿಂದ ಹೆಂಡ ಕುಡಿಯುವವರು ಯಾವುದಾದರೂ ಗಿರಾಕಿಗಳು ಬಂದರೆ ಭಯದಿಂದ ರಾತ್ರಿಯ ಸಮಯದಲ್ಲಿ ಬರಲು ಹೇಳುವರು. ರಾತ್ರಿಯ ಸಮಯದಲ್ಲಿ ಕೆಲವರು ಎಣ್ಣೆ(ಹೆಂಡ) ಕುಡಿಯುವರು. ಎಲೆ, ತಂಬಾಕು ಅಭ್ಯಾಸಗಳನ್ನು ಗಮನಿಸಬಹುದು.

***ಪ್ರತಿವಾರದ ಕಾರ್ಯಗಳು:*** ದೇವದಾಸಿಯರಿಗೆ ಮಂಗಳವಾರ ಮತ್ತು ಶುಕ್ರವಾರ ದಿನಗಳಲ್ಲಿ ವಿಶೇಷ ಗಳಿಕೆಯಾಗುವುದು. ಇಲ್ಲಿಗೆ ಬಂದಂತಹ ಭಕ್ತಾದಿಗಳು ದುಡ್ಡು ಕೊಡುವವರು. ನೈವೇದ್ಯ ತೆಗೆದುಕೊಳ್ಳುತ್ತಿದ್ದರು.

***ಪ್ರತಿ ತಿಂಗಳ ಹುಣ್ಣಿಮೆ:*** ಇವರ ಪಾಲಿಗೆ ಬೆಳದಿಂಗಳು ಬೇಡಿಕೊಂಡವರು, ಹರಕೆ ಹೊತ್ತವರು, ಪಾದಕಟ್ಟಿಕೊಂಡವರು ಬಂದು ಜೋಗಮ್ಮರಿಗೆ ಹಣ ನೀಡುವುದನ್ನು ಕಾಣಬಹುದು[13].

***ಜಾತ್ರೆ ಉತ್ಸವ:*** ವರ್ಷಕ್ಕೊಮ್ಮೆ ಬರುವ ಹಬ್ಬಗಳು ದೇವದಾಸಿಯರಿಗೆ ವಿಶೇಷ ಇಲ್ಲಿಗೆ ಬಂದಂಥ ಭಕ್ತಾದಿಗಳಿಂದ ಹರಕೆ ಹೊತ್ತವರಿಂದ ಸೀರೆ ಕುಬುಸಗಳು ಸಿಗುವುದು. ಈ ಜಾತ್ರೆ, ಉತ್ಸವಗಳು ಹಣದ ಸುರಿಮಳೆಯಾಗುವುದು. ಬಂದಂತಹ ಹಣ ಸಂಗ್ರಹ ಮಾಡುವುದು ಪಾಪಕ್ಕೆ ಕಾರಣವೆಂಬ ತತ್ವದಿಂದ ಆ ದಿನದ ಹಣವನ್ನು ಆ ದಿನವೇ ಖರ್ಚು ಮಾಡಿಬಿಡುತ್ತಾರೆ. ಇಲ್ಲಿನ ಜನ ವಿಶಿಷ್ಟವೆಂಬಂತೆ ಹಣ ಇದ್ದಾಗಲೇ ಚಿಂತೆ, ಇರದಾಗಲೇ ನಿಶ್ಚಿಂತೆ ಎಂಬ ತತ್ವ ಇಲ್ಲಿನ ಜನ ಹಿಂದಿಗೂ ಆಚರಿಸುವವರು.

***ಜೋಗಪ್ಪನ ವೇಷ–ಭೂಷಣಗಳು:*** ಜೋಗಪ್ಪನಿಗೆ ಹೆಣ್ಣಿನ ಅಲಂಕಾರವಸ್ತುಗಳಾದ ಸೀರೆ,ಬಳೆ,ಹಣೆ ತುಂಬಾ ಕುಂಕುಮ, ಮಣಿ, ಬೈತಲೆ, ಮುತ್ತಿನಹಾರ, ಹೂವು, ಕಾಡಿಗೆ, ಕಾಲುಂಗುರ, ಮಂಗಳಸೂತ್ರ ಕವಡೆಸರ, ತಲೆಮೇಲೆ ಜಗಹೊತ್ತು ಹೆಣ್ಣಿನ ರೀತಿಯ ಸೌಂದರ್ಯ ವರ್ಧಕಗಳನ್ನು ಸುಂದರವಾಗಿ ಧರಿಸುತ್ತಾರೆ. ಅಷ್ಟೇ ಅಲ್ಲದೆ ಕೆಲವರು ಹೆಂಗಸರಾದರೆ ಮತ್ತೆ ಕೆಲವರು ಗಂಡೇ ಹೆಣ್ಣಾಗಿ ಮಾರ್ಪಟ್ಟ ನಪುಂಸಕರನ್ನು ಇಲ್ಲಿ ಕಾಣಬಹುದು[14].

***ಜೋಗತಿ ಕುಣಿತ:*** ಜೋಗ ಎಂಬ ಪದವು ವೈದಿಕ ಪರಿಭಾಷಿಕ ಪದವಾದ ಯೋಗವಾಗಿದೆ. ಯೋಗ–ಜೋಗ ತತ್ಸಮ ತದ್ಭವವಾಗುವುದನ್ನು ಮತ್ತು ಜೋಗನಿಯನ್ನು ಯೋಗನಿಯಾಗಿ ನೋಡಬಹುದು. ಜೋಗತಿಯರು ಜಗವನ್ನು ಹೊತ್ತುಕೊಂಡು ಕುಣಿಯುವವರು. ಜಗ ಎಂದರೆ ಎಲ್ಲಮ್ಮನ ಮೂರ್ತಿಯನ್ನು ಇರಿಸಿರುವ ತುಂಬಿದ ಕೊಡ ಅಥವಾ ಬುಟ್ಟಿಯಾಗಿರುತ್ತದೆ[15].

***ರಂಗಮಂಟಪ:*** ನೃತ್ಯ ಮತ್ತು ಹಾಡುಗಾರಿಕೆಗೆ ಬಳಸುವವರು. ಸ್ತ್ರೀಯರು ದೇವಸ್ಥಾನಗಳಲ್ಲಿ ಘಂಟೆ ಭಾರಿಸುವುದು, ಚಾರಿ ಬೀಸುವುದು, ನೃತ್ಯ ಮತ್ತು ಇತರೆ ಸೇವೆಗಳು ಮಾಡುತ್ತಿದ್ದರು. ಅಷ್ಟೇ ಅಲ್ಲದೆ ಜೀವನಕ್ಕಾಗಿ ಶ್ರೀಮಂತರ ಆಳುಗಳಾಗಿ ಮತ್ತು ಪುರೋಹಿತರಿಗೆ ಮೈಯನ್ನು ಅರ್ಪಿಸಿಕೊಂಡು ಬದುಕುವ ದುಸ್ಥಿತಿ ಬಂತು ಆದ ಕಾರಣ ದೇವಾಲಯದಿಂದ ಹೋರ ಹಾಕಿದರು. ದೇವರಿಗೆ ಮೀಸಲಾದ ಇವರನ್ನು ದೇವದಾಸಿಯರು ಎಂಬುದಾಗಿ ಕರೆಯಲಾಯಿತು. ಆದರೆ ಎಲ್ಲಮ್ಮನ ಸಂಪ್ರದಾಯದಲ್ಲಿ ದೇವದಾಸಿಯರನ್ನು 'ಜೋಗತಿ' ಎಂದು ಕರೆಯುತ್ತಿದ್ದರು. ಇವುಗಳನ್ನು ನಡೆಸುವವರು ಪಾತರ ಸೂಳೆ, ಓಲಗದ ಸೂಳೆ, ಚಾಮರದ ಸೂಳೆ, ಕಂಬದ ಸೂಳೆ, ದೇಗುಲದ ಸೂಳೆ, ಧೂಪದ ಸೂಳೆ,

---

[13] ಅದೇ. ಪುಟ 146

[14] ಮಂಜುನಾಥ ಬೇವಿನಕಟ್ಟಿ. (2009). *ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪುಟ. 99

[15] ಬೋರಲಿಂಗಯ್ಯ ಹಿ.ಚಿ. (1996). ಕರ್ನಾಟಕ ಜನಪದ ಕಲೆಗಳ ಕೋಶ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ 80

ಗಂಧದ ಸೂಳೆ, ಹೂವಿನ ಸೂಳೆಯರೆಂದು ಕರೆಯುತ್ತಾರೆ.

ಸವದತ್ತಿ ಎಲ್ಲಮ್ಮಳ ಸಂಪ್ರದಾಯದ ದೇವರುಗಳಿಂದ ಒಂದು ಜನಾಂಗದ ಸಂಸ್ಕೃತಿ ನಿರ್ಮಾಣವಾಗಿ ಒಂದೇ ಕುಟುಂಬ ಎಂಬ ಭಾವನೆ ಬೆಳೆದದ್ದನ್ನು ಇಲ್ಲಿ ಕಾಣಬಹುದು.

1. ದೇವಿ ಇದ್ದಾಳೆಂಬ ಭಯದ ವಾತಾವರಣದಿಂದ ಯಾರೇ ಆಗಲಿ ಕೆಟ್ಟ ಕೆಲಸ ಮಾಡಲು ಇಷ್ಟಪಡುತ್ತಿರಲಿಲ್ಲ.
2. ಎಲ್ಲಮ್ಮ ದೇವಿಯ ಪೂಜಾ ವಿಧಿ ವಿಧಾನಗಳಿಂದ ಜನರಲ್ಲಿ ಭಕ್ತಿಯೊಂದಿಗೆ ಶಿಸ್ತು ಸಂಯಮ ಹೆಚ್ಚಾಯಿತು.
3. ಜೋಗಮ್ಮ ಜೋಗಪ್ಪರ ಕುಣಿತದಿಂದ ಸಂಪತ್ತು ಬೆಳೆಯಿತು.
4. ಚೌಡಿಕೆಯಿಂದ ಜನಪದ ಸಂಪತ್ತು ಬೆಳೆಯುತ್ತಿರುವುದನ್ನು ಕಾಣಬಹುದು.
5. ಎಲ್ಲಮ್ಮನ ಕುರಿತ ಹಾಡುಗಳಿಂದಲೂ ಸಾಹಿತ್ಯದೊಂದಿಗೆ ಸಂಪತ್ತು ಹೆಚ್ಚಾಯಿತು. ಸಾಂಸ್ಕೃತಿಕವಾಗಿ ಆಚಾರ–ವಿಚಾರಗಳು ಹೆಚ್ಚಾದಂತೆ ಮಾನವೀಯತೆಯೂ ಹೆಚ್ಚಾಯಿತು
6. ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ನಾವೆಲ್ಲರೂ ಎಲ್ಲಮ್ಮನ ಮಕ್ಕಳೆಂದು ಒಂದೇ ಕುಟುಂಬದ ಜನರು ಎಂಬ ಭಾವನೆ ಬೆಳೆಯಿತು.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಬೆಳಗಾವಿ ಜಿಲ್ಲೆಯ ಸವದತ್ತಿ ಶಕ್ತಿದೇವತೆಗಳ ನೆಲೆಬೀಡಾಗಿದೆ. ಎಲ್ಲಮ್ಮ ಮತ್ತು ಇಲ್ಲಿನ ದೇವದಾಸಿ ಪದ್ಧತಿ, ಜಾತ್ರೆ, ಉತ್ಸವ, ಹಬ್ಬಗಳಲ್ಲಿ ಜೋಗಪ್ಪ ಜೋಗಮ್ಮರ ಆಚರಣೆಗಳಿಂದ ನನ್ನ ಮೇಲೆ ಉಂಟುಮಾಡಿದ ಆಕರ್ಷಣೆಯ ಫಲವಾಗಿ ನಾನು ದೇವದಾಸಿ ಪದ್ಧತಿ ಬಗ್ಗೆ ಅಧ್ಯಯನ ಮಾಡಲು ಪ್ರೇರಕಶಕ್ತಿಯಾಗಿದೆ. ಪುರೋಹಿತರ ಕೈಯಲ್ಲಿ ದೇವದಾಸಿಯಾಗಿ, ರಾಜರ ಕೈಯಲ್ಲಿ ರಾಜದಾಸಿ(ಪಾತ್ರದವರು)ಯಾಗಿ, ಸಿದ್ಧರ ಕೈಯಲ್ಲಿ ಜೋಗತಿಯಾಗಿ, ಊರ ಮುಖಂಡರ ಕೈಯಲ್ಲಿ ಬಸವಿಯಾಗಿ ಮತ್ತು ಎಲ್ಲರ ಕೈಯಲ್ಲಿ ಸೂಳೆಯಾಗಿ ಪ್ರಚಲಿತವಾಗಿದ್ದಾರೆ. ಈ ಪದ್ಧತಿಗಳು ವರ್ಷದಿಂದ ವರ್ಷಕ್ಕೆ ಬದಲಾವಣೆ ಆಗುತ್ತಾ ಹೋಗುತ್ತಿರುವುದು ವಿಪರ್ಯಾಸವೇ ಹೌದು. ಆದರೆ ಇಲ್ಲಿನ ಆಚರಣೆಗಳ ಮೂಲ ಆಚಾರ–ವಿಚಾರ, ನಂಬಿಕೆ, ಸಂಪ್ರದಾಯಗಳಲ್ಲಿನ ಪದ್ಧತಿಗಳು ಮಾರ್ಪಾಡಾಗಿರುವುದನ್ನು ಗಮನಿಸಬಹುದು.

**ಪರಾಮರ್ಶನ ಗ್ರಂಥಗಳು**


- ಬಾಶಮ್ ಎಲ್. (2012). *ಪ್ರಾಚೀನ ಭಾರತವೆಂಬ ಅದ್ಭುತ.* ಐಬಿಎಚ್ ಪ್ರಕಾಶನ.
- ಭಾಗೀರತಿ ಕುಯ್ಯಾಗೋಳ. (2014). *ಸವದತ್ತಿ ತಾಲೂಕಿನ ಇಂಚಲ ಮಠ ಮತ್ತು ಅದರ ಶಾಖಾ ಮಠಗಳ ಒಂದು ಐತಿಹಾಸಿಕ ಅಧ್ಯಯನ.* (ಪಿಎಚ್.ಡಿ ಪ್ರಬಂಧ). ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- ಬೋರಲಿಂಗಯ್ಯ ಹಿ.ಚಿ. (1996). *ಕರ್ನಾಟಕ ಜನಪದ ಕಲೆಗಳ ಕೋಶ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಚೆನ್ನಣ್ಣ ವಾಲೀಕಾರ. (2001). *ಕರ್ನಾಟಕ ದೇವದಾಸಿಯರ ಸಮಾಜೋ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ.*
- ಗೋಪಾಲರಾವ್ ಎಚ್. ಎಸ್. (1993). *ಶಾಸನಗಳ ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು–ಸಾಂಸ್ಕೃತಿಕ ಅಧ್ಯಯನ.* ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ.
- ಮಂಜುನಾಥ ಬೇವಿನಕಟ್ಟಿ. (2009). *ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶ್ರೀಕಂಠಶಾಸ್ತ್ರೀ ಎಸ್. (1944). ಭಾರತೀಯ ಸಂಸ್ಕೃತಿ. ಕಾಮಧೇನು ಪುಸ್ತಕ ಭವನ.